Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.



| | | | |
|---|---|---|---|
| सं–1 | नई दिल्ली, सोमवार, मे 5 -1997 | वैशाख 15, 1919 (शक) | खन्ड–16 |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |



## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978

ಕೆಲವು ಜವಳಿ ಮತ್ತು ಜವಳಿ ವಸ್ತುಗಳ ಮೇಲೆ ಅಧಿಕ ಉತ್ಪಾದನಾ ಶುಲ್ಕವನ್ನು ವಿಧಿಸಲು ಮತ್ತು ಸಂಗ್ರಹಿಸಲು ಉಪಬಂಧಿಸುವ ಅಧಿನಿಯಮ,

ಇದು ಭಾರತ ಗಣರಾಜ್ಯದ 29ನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 ಎಂದು ಕರೆಯತಕ್ಕದ್ದು.

(2) ಇದು 1978ರ ಅಕ್ಟೋಬರ್ 4ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ "ಹತ್ತಿಬಟ್ಟೆಗಳು". "ರೇಷ್ಮೆ ಬಟ್ಟೆಗಳು", "ಉಣ್ಣೆಬಟ್ಟೆಗಳು", "ಮನುಷ್ಯ ನಿರ್ಮಿತ ಬಟ್ಟೆಗಳು" ಮತ್ತು ಊಣ್ಣೆ ಮೇಲಂಗಿಗಳು" ಎಂಬ ಪದಗಳು ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944ರ ಮೊದಲು ಅನುಸೂಚಿಯ ಬಾಬು ಸಂಖ್ಯೆ 19, 20, 21, 22 ಮತ್ತು 43 ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕದ್ದು.

**3. ನಿರ್ದಿಷ್ಟ ಜವಳಿಗಳು ಮತ್ತು ಜವಳಿ ವಸ್ತುಗಳ ಮೇಲೆ ಅಧಿಕ ಉತ್ಪಾದನಾ ಶುಲ್ಕವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು:**– (1) ಉತ್ಪಾದನಾ ಶುಲ್ಕವನ್ನು ವಿಧಿಸುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಹೊರಡಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿಸೂಚನೆಯೊಂದಿಗೆ ಓದಲಾದ ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944 (1944ರ 1) ರ ಮೇರೆಗೆ ಹಾಗೆ ಉತ್ಪಾದನಾ ಶುಲ್ಕವನ್ನು ವಿಧಿಸಬೇಕಾದ, ಅನುಸೂಚಿಯಲ್ಲಿ ನಮೂದಿಸಿದ ವಿವರಣೆಯ ಸರಕುಗಳ ಮೇಲೆ ಶುಲ್ಕ ನಿರ್ಧರಣೆ ಮಾಡಿದಾಗ ಅಂಥ ಸರಕುಗಳ ಮೇಲೆ ವಿಧಿಸಬೇಕಾದ ಒಟ್ಟು ಮೊಬಲಗಿನ ಶೇಕಡಾ ಇಪ್ಪತ್ತಕ್ಕೆ ಸಮವಾದ ಉತ್ಪಾದನಾ ಶುಲ್ಕವನ್ನು ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

(2) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳಿಗೆ ಸಂಬಂಧಿಸಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಉತ್ಪಾದನಾ ಶುಲ್ಕಗಳು ಅಂಥ ಸರಕುಗಳ ಮೇಲೆ ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ವಿಧಿಸಬೇಕಾದ ಉತ್ಪಾದನಾ ಶುಲ್ಕಗಳಿಗೆ ಹೆಚ್ಚಿಗೆಯಾಗಿರತಕ್ಕದ್ದು ಮತ್ತು ಅವುಗಳನ್ನು ಒಕ್ಕೂಟದ ಉದ್ದೇಶಗಳಿಗಾಗಿ ವಿಧಿಸತಕ್ಕದ್ದು ಮತ್ತು ಅದರ ಹುಟ್ಟುವಳಿಗಳನ್ನು ರಾಜ್ಯಗಳಲ್ಲಿ ವಿತರಣೆ ಮಾಡತಕ್ಕದ್ದಲ್ಲ.

(3) ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944 (1944ರ 1) ರ ಉಪಬಂಧಗಳು ಮತ್ತು ಶುಲ್ಕಗಳ ಮರುಪಾವತಿ ಮತ್ತು ಅವುಗಳಿಂದ ವಿನಾಯಿತಿಗಳಿಗೆ ಸಂಬಂಧಿಸಿದ ನಿಯಮಗಳೂ ಸೇರಿ ಅದರ ಮೇರೆಗೆ ರಚಿತವಾದ ನಿಯಮಗಳು ಆದಷ್ಟು ಮಟ್ಟಿಗೆ ಆ ಅಧಿನಿಯಮದ ಅಥವಾ ಆ ನಿಯಮಗಳ ಮೇರೆಗೆ ಅಂಥ ಸರಕುಗಳ ಮೇಲೆ ಉತ್ಪಾದನಾ ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ

ಸಂಬಂಧಿಸಿ ಅನ್ವಯವಾಗುವಂತೆ, ಯಾವುವೇ ಸರಕುಗಳಿಗೆ ಸಂಬಂಧಿಸಿ ಈ ಪ್ರಕರಣದ ಮೇರೆಗೆ ವಿಧಿಸಬೇಕಾದ ಉತ್ಪಾದನಾ ಶುಲ್ಕಗಳನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು.

**4. ನಿರಸನ ಮತ್ತು ಉಳಿಸುವಿಕೆಗಳು.–** (1) ಅಧಿಕ ಉತ್ಪಾದನಾ ಶುಲ್ಕಗಳ (ಜವಳಿ ಮತ್ತು ಜವಳಿ ವಸ್ತು) ಅಧ್ಯಾದೇಶ, 1978 (1978ರ 4 ) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಅಂಥ ನಿರಸನವಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧವ ಮೇರೆಗೆ ಮಾಡಿದುದೆಂದು ಅಥವಾ ಕೈಗೊಂಡುದೆಂದು ಭಾವಿಸತಕ್ಕದ್ದು.

ಅನುಸೂಚಿ

(3ನೇ ಪ್ರಕರಣ ನೋಡಿ)

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1. | 2 |
| 1. | ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944 ರ ಮೊದಲ ಅನುಸೂಚಿಯಲ್ಲಿನ ಬಾಬು ಸಂಖ್ಯೆ 18 **I**, 18 **II**,18 **III**,18 **IV**,ರಲ್ಲಿ ವಿವರಿಸಲಾದ ಎಲ್ಲಾ ವಿಧವಾದ ಬಟ್ಟೆಗಳು ಮತ್ತು ನಾರುಗಳು, ಮನುಷ್ಯ ನಿರ್ಮಿತ ರೇಷ್ಮೆ ಎಳೆಗಳು, ಸೆಲ್ಯೂಲೋಸಿಕ್ ಸ್ಪನ್ ಎಳೆಗಳು ಮತ್ತು ನಾನ್‌ಸೆಲ್ಯೂಲೋಸಿಕ್ ನಿರುಪಯುಕ್ತ ಎಳೆಗಳು ಇವುಗಳಿಗೆ ಹೊರತಾದ ಮನುಷ್ಯ ನಿರ್ಮಿತ ಬಟ್ಟೆಗಳು. |
| 2. | ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944ರ ಮೊದಲ ಅನುಸೂಚಿಯ ಬಾಬು ಸಂಖ್ಯೆ 18ಎ ನಲ್ಲಿ ವಿವರಿಸಲಾಗಿರುವ ಎಲ್ಲಾ ವಿಧವಾದ ಹತ್ತಿ ಎಳೆಗಳು. |
| 3. | ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944ರ ಮೊದಲ ಅನುಸೂಚಿಯ ಬಾಬು ಸಂಖ್ಯೆ 18ಬಿ ನಲ್ಲಿ ವಿವರಿಸಲಾಗಿರುವ ಉಣ್ಣೆ ಮತ್ತು ಅಕ್ರಿಲಿಕ್ ಸ್ಪನ್ ಎಳೆಗಳು. |
| 4. | ಕೇಂದ್ರ ಉತ್ಪಾದನೆಗಳು ಮತ್ತು ಉಪ್ಪು ಅಧಿನಿಯಮ, 1944 ರ ಮೊದಲ ಅನುಸೂಚಿಯ ಬಾಬು ಸಂಖ್ಯೆ 18ಇ ನಲ್ಲಿ ವಿವರಿಸಿರುವಂತೆ ಸೆಲ್ಯೂಲೋಸಿಕ್ ಅಲ್ಲದ ಸ್ಪನ್ ಎಳೆಗಳು. |
| 5. | ಹತ್ತಿ ಬಟ್ಟೆಗಳು. |
| 6. | ರೇಷ್ಮೆ ಬಟ್ಟೆಗಳು. |
| 7. | ಉಣ್ಣೆ ಬಟ್ಟೆಗಳು. |
| 8. | ಮನುಷ್ಯ ನಿರ್ಮಿತ ಬಟ್ಟೆಗಳು. |
| 9. | ಉಣ್ಣೆ ಮೇಲಂಗಿಗಳು. |